9)	ಕಾವೇರಿವನ ಹಾಗೂ ಶಿವಪುರಸೌದ	1.45
10)	ಬೃಂದಾವನ ಉದ್ಯಾನವನ	3.00
11)	ಕೆ.ಎಂ.ಸಿ. ಆಸ್ಪತ್ರೆ	1.17
12)	ಹಿಡಕಲ್	3.70
13)	ಹುಲುಮೆ	1.53
14)	ಆಲಮಟ್ಟಿ	1.77
15)	ಬಸವನ	2.31
16)	ಪಂಪಾವನ	3.96
17)	ಕೆ.ಆರ್. ಹಿಲ್ಸ್	2.50
	ಗಿರಿದಾಮ (ಉದ್ಯಾನ ನಿರ್ವಹಣೆ ಒಟ್ಟು)	78.16

ಇ) ಇಲ್ಲ

ಈ) ಪರಿಶೀಲಿಸಲಾಗುವುದು.

ಸಕಲೇಶಪುರ ಕ್ಷೇತ್ರದಲ್ಲಿ ಅಕ್ರಮ ಸಾಗುವಳಿಯ ಸಕ್ರಮ

606 (934) ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಕಲೇಶಪುರ ಕ್ಷೇತ್ರದಲ್ಲಿ ಎಷ್ಟು ಎಕರೆ ಭೂಮಿ ಅಕ್ರಮ ಸಾಗುವಳಿಯಾಗಿದೆ; (ತಾಲ್ಲೂಕುವಾರು ವಿವರ ನೀಡುವುದು)

ಆ) ಈ ಅಕ್ರಮ ಸಾಗುವಳಿ ಯಾವ ಭೂಮಿಯಲ್ಲಿ (ಅಂದರೆ ಅರಣ್ಯ, ಹುಲ್ಲುಗಾವಲು ಸರ್ಕಾರಿ ಪದಾ) ಮಾಡಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು);

ಇ) ಸಕ್ರಮಗೊಳಿಸಲು ಕೋರಿ ಬಂದ ಒಟ್ಟು ಅರ್ಜಿಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ವಿವರ ನೀಡುವುದು);

ಈ) ಎಷ್ಟು ಪ್ರಕರಣಗಳಡಿಯಲ್ಲಿ ಅಕ್ರಮ ಭೂಮಿಯನ್ನು ಸಕ್ರಮಗೊಳಿಸಿದೆ (ತಾಲ್ಲೂಕುವಾರು ವಿವರ ನೀಡುವುದು);

ಉ) ಈಗ ಬಾಕಿ ಉಳಿದಿರುವ ಪ್ರಕರಣಗಳು (ತಾಲ್ಲೂಕುವಾರು ವಿವರ ನೀಡುವುದು)?

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು):

ಅ) ಜಿಲ್ಲಾಧಿಕಾರಿಗಳ ವರದಿಯಂತೆ:

ಸಕಲೇಶಪುರ ತಾಲ್ಲೂಕು	16459-18 ಎಕರೆ
ಆಲೂರು ತಾ:	7889-17 ಎಕರೆ
ಒಟ್ಟು	24348-35 ಎಕರೆ

ಅ)

	ಸಕಲೇಶಪು	ಆಲೂರು
1)	ಗೋಮಾಳ 16194-08	7771-29
2)	ಸರ್ಕಾರಿ ಬೀಳು 101-00	49-21
3)	ಅರಣ್ಯಭೂಮಿ 108-04	42-03
4)	ಹುಲ್ಲುಗಾವಲು 53-06	26-04
	13459-18	7889-17

	ಸಕಲೇಶಪು	ಆಲೂರು
ಇ)	1329	2453
ಈ)	506	2396
ಉ)	823	60

ಸಕಲೇಶಪುರ ಬಸ್ ಡಿಪೋ ಕುರಿತು

607 (933) ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಕಲೇಶಪುರ ಡಿಪೋದಲ್ಲಿ ಕಾರ್ಯ ನಿರ್ವಹಿಸಬೇಕಿದ್ದ ಚಾಲಕರ ನಿರ್ವಾಹಕರ ಮೆಕ್ಯಾನಿಕ್‌ಗಳ ಸಂಖ್ಯೆ ಎಷ್ಟು ಹಾಗೂ ಈಗ ಇರುವ ಚಾಲಕರ, ನಿರ್ವಾಹಕರ ಮೆಕ್ಯಾನಿಕ್‌ಗಳ ಸಂಖ್ಯೆ ಎಷ್ಟು ಹಾಗೂ ಅನಧಿಕೃತ ಗೈರು ಹಾಜರಿ ಇರುವವರ ಸಂಖ್ಯೆ ಎಷ್ಟು;

ಆ) ಖಾಲಿ ಇರುವ ಹುದ್ದೆಗಳನ್ನು ತುಂಬಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಸಚಿವರು):

ಅ) ಹಾಸನ ವಿಭಾಗದ ಸಕಲೇಶಪುರ ಡಿಪೋದಲ್ಲಿ ಕಾರ್ಯ ನಿರ್ವಹಿಸಬೇಕಿದ್ದ ಹಾಗೂ ಕಾರ್ಯ ನಿರ್ವಹಿಸುತ್ತಿರುವ ಚಾಲಕರ, ನಿರ್ವಾಹಕರ ಮತ್ತು ಮೆಕ್ಯಾನಿಕ್‌ಗಳ ವಿವರವು ಈ ಕೆಳಕಂಡಂತಿದೆ.